ಶ್ರೀ ಬಿ. ಎಸ್. ಯಡಿಯೂರಪ್ಪ.—ಬೇರೆ ರೀತಿಯ ಯಾವುದೇ ತನಿಖೆ ಬೇಡ. ಸದನದ ಸಮಿತಿಯನ್ನು ಮಾಡಿ. ಲಕ್ಷಾಂತರ ಜನರು ಇವತ್ತು ನೋಡುತ್ತಿದ್ದಾರೆ. ಜನರಿಗೂ ಸತ್ಯ ಗೊತ್ತಾಗಲಿ.

ಶ್ರೀ ಬಿ. ರಾಚಯ್ಯ.—ಅತ್ಯಾಚಾರದ ವಿಚಾರ ಬಂದಾಗ ದಲಿತರ ಹೆಸರು ತರುತ್ತಾರೆ. ಯಾವುದೇ ವಿಷಯ ಬಂದರೂ ದಲಿತರ ಹೆಸರು ತರುತ್ತಾರೆ. ಈ ರೀತಿ ದಲಿತರ ಹೆಸರುಗಳನ್ನು ಹೇಳಿ ಮಾನ್ಯ ಸದಸ್ಯರುಗಳ ಗಮನವನ್ನು ಸೆಳೆಯುವುದಕ್ಕೆ ಪ್ರಯತ್ನ ಮಾಡಬೇಡಿ. ಶಿಕಾರಿಪುರದಲ್ಲಿ ಎಷ್ಟು ಅರಣ್ಯ ಲೂಟಿ ಆಗಿದೆ ಎಂಬ ಬಗ್ಗೆ ಹೇಳಿದರೆ ನಿಮಗೆ ಗೊತ್ತಾಗುತ್ತದೆ. ನಿಷ್ಪಕ್ಷಪಾತವಾಗಿ ಮತ್ತು ಪ್ರಾಮಾಣಿಕತೆಯಿಂದ ತನ್ನ ಪ್ರಾಣದ ಹಂಗನ್ನೇ ತೊರೆದು ಯಾವ ರೀತಿ ಈ ಅಧಿಕಾರಿ ಕೆಲಸ ಮಾಡಿದ್ದಾರೆ. ಇಂಥ ಒಳ್ಳೆಯ ಅಧಿಕಾರಿಯ ಒಳ್ಳೆಯ ಕೆಲಸಗಳಿಗೆ ಪ್ರೋತ್ಸಾಹ ಕೊಡದಿದ್ದರೆ ಸರ್ಕಾರ ಕರ್ತವ್ಯ ಲೋಪ ಮಾಡಿದ ಹಾಗೆ ಆಗುತ್ತದೆ. ನಿಜವಾಗಿ ಅವನು ತಪ್ಪಿತಸ್ಥ ಎಂದು ತನಿಖೆಯಲ್ಲಿ ಗೊತ್ತಾದರೆ ಅವನನ್ನು ಡಿಸ್ಮಿಸ್ ಮಾಡುವುದಕ್ಕೂ ನಾನು ತಯಾರಿದ್ದೇನೆ.

ಶ್ರೀ ಬಿ. ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೇ,.....

ಅಧ್ಯಕ್ಷರು.—ನೀವು ಏನು ಮಾತನಾಡಿದರೂ ರೆಕಾರ್ಡ್‌ಗೆ ಹೋಗುವುದಿಲ್ಲ.

(ಮಾನ್ಯ ಸದಸ್ಯರಾದ ಶ್ರೀ ಬಿ. ಎಸ್. ಯಡಿಯೂರಪ್ಪನವರು ಸಭಾಧ್ಯಕ್ಷರ ಮುಂಭಾಗದಲ್ಲಿರುವ ಅವರಣದೊಳಗೆ ಪ್ರವೇಶ ಮಾಡಿದರು.)

ಅಧ್ಯಕ್ಷರು.—ನೀವು ನಿಮ್ಮ ಜಾಗಕ್ಕೆ ಹೋಗಿ.

(ಗೊಂದಲ)

ಅಧ್ಯಕ್ಷರು.—ನೀವು ಏನೇ ಮಾತನಾಡಿದರೂ ಅದು ರೆಕಾರ್ಡ್‌ಗೆ ಹೋಗುವುದಿಲ್ಲ.

(ಗೊಂದಲ)

ಅಧ್ಯಕ್ಷರು.—ಮಾನ್ಯ ಯಡಿಯೂರಪ್ಪನವರು ಗಮನ ಸೆಳೆಯುವ ಸೂಚನೆಯು ವಾಪಸ್ಸಾತಿ ವಾಯಿತು. ಮಾನ್ಯ ಎಂ.ಎಸ್. ನಾರಾಯಣರಾವ್‌ರವರು ತಮ್ಮ ಗಮನ ಸೆಳೆಯುವ ಸೂಚನೆಯನ್ನು ಮಂಡಿಸಿ.

(ಈ ಹಂತದಲ್ಲಿ ಮಾನ್ಯ ಶ್ರೀ ಬಿ. ಎಸ್. ಯಡಿಯೂರಪ್ಪನವರು ಮಾತನಾಡುವುದನ್ನು ರೆಕಾರ್ಡ್ ಮಾಡಿಕೊಳ್ಳಬೇಡಿರಿಂತೆ ಅಧ್ಯಕ್ಷರು ಆದೇಶಿಸಿದರು)

ಶ್ರೀ ಬಿ. ಎಸ್. ಯಡಿಯೂರಪ್ಪ.—ಈ ಸರಕಾರದಲ್ಲಿ ದಲಿತರಿಗೆ ನ್ಯಾಯ ಸಿಗುತ್ತಾ ಇಲ್ಲ, ಇದನ್ನು ಪ್ರತಿಭಟಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು.)

ಏಯ್ಡ್ಸ್ ರೋಗಾಣುಗಳಿಂದ ಕೂಡಿದ ಔಷಧಿಗಳನ್ನು ಮಹಿಳೆಯರಿಗೆ ನೀಡಿರುವ ಬಗ್ಗೆ ಹಾಗೂ ನಿವಾರಣಾ ಕ್ರಮ ಕೈಗೊಳ್ಳುವಲ್ಲಿ ಸರ್ಕಾರದ ವಿಫಲತೆ.

ಶ್ರೀ ಎಂ. ಎಸ್. ನಾರಾಯಣರಾವ್.—ಮಾನ್ಯ ಅಧ್ಯಕ್ಷರೇ, ಏಡ್ಸ್ ರೋಗಾಣುಗಳಿಂದ ಕೂಡಿದ ಔಷಧಿಗಳನ್ನು ಸರಿಸುಮಾರು ೧೨೦ ಮಹಿಳೆಯರಿಗೆ ನೀಡಿರುವ ಬಗ್ಗೆ ಹಾಗೂ ನಿವಾರಣಾ ಕ್ರಮ ಕೈಗೊಳ್ಳುವಲ್ಲಿ ಸರ್ಕಾರದ ವಿಫಲತೆಯ ಬಗ್ಗೆ ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಯವರ ಗಮನವನ್ನು ಸೆಳೆಯುತ್ತೇನೆ.

ಶ್ರೀ ಜೆ. ಎಸ್. ದೇಶಮುಖ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).—ಮಾನ್ಯ ಅಧ್ಯಕ್ಷರೆ, ಏಡ್ಸ್ ರೋಗಾಣುಗಳು ಅಂದರೆ ಏಡ್ಸ್ ವೈರಸ್‌ನಿಂದ ಕೂಡಿದ ಔಷಧಿಗಳು ಕರ್ನಾಟಕದಲ್ಲಿ ಮಾರಾಟವಾಗಿರುವುದು ನಿಜವಾದ ಸಂಗತಿಯಲ್ಲ. ಕರ್ನಾಟಕ ರಾಜ್ಯದ ಹೊರಗಡೆ ತಯಾರಿಸಲ್ಪಟ್ಟಿರುವ ಏಡ್ಸ್ "ಅಂಟಿಬಾಡಿನಿಂದ" ಕೂಡಿದ ಇಮ್ಯಾನೊ ಗ್ಲೂಬುಲಿನ್ಸ್ ಮತ್ತು ಸೀರಮಬೇಸ್ಡ್ ಔಷಧಿಗಳು ಮಾರಾಟವಾಗಿರುವುದು ಜನವರಿ ೧೯೮೯ರಲ್ಲಿ ವರದಿಯಾಗಿದೆ. ದೋಷಯುಕ್ತವಾದ ಈ ಔಷಧಿಗಳನ್ನು ಮಾರಾಟವನ್ನು ಪ್ರತಿಬಂಧಿಸಲು ಹಾಗೂ ಇಂತಹ ಔಷಧಿ